# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009**

**ದೂರವಾಣಿ ಸಂಖ್ಯೆ:** 080-22212343
**ಫ್ಯಾಕ್ಸ್ ಸಂಖ್ಯೆ:** 080-22278803

**ಅಂತರ್ಜಾಲ:** https://kptcl.karnataka.gov.in
**ಇ-ಮೇಲ್ ವಿಳಾಸ:** director.ahr.kptcl@gmail.com


ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ಅಧಿಕಾರಿ/ನೌಕರರಿಗೆ ನಿವೃತ್ತಿ/ ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡುವ/ಅಧಿಕರಿಸುವ ಪ್ರಾಧಿಕಾರಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಆಇ34 ಪಿಇಎನ್ 2018 ದಿನಾಂಕ: 23/06/2018
2. ಕವಿಪ್ರನಿನಿ ಅಧಿಕಾರ ಪ್ರತ್ಯಾಯೋಜನೆ ಕೈಪಿಡಿ-2018 ರ ತಿದ್ದುಪಡಿ ಆದೇಶ ದಿನಾಂಕ: 17/01/2019
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21 ದಿನಾಂಕ: 25/11/2020
4. ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018(ಭಾ) ದಿನಾಂಕ: 19/08/2021.
5. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ93/36012/2021-22 ದಿನಾಂಕ:26.10.2021.
6. ದಿನಾಂಕ:15.09.2022 ರಂದು ನಡೆದ 135ನೇ ನಿರ್ದೇಶಕರ ಮಂಡಳಿ ಸಭೆಯ ನಿರ್ಣಯ.
7. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ಅನುಮೋದನೆ ನೀಡಿರುವ ಟಿಪ್ಪಣಿ ದಿನಾಂಕ: 02/08/2023.

**ಪ್ರಸ್ತಾವನೆ:**

ಉಲ್ಲೇಖ (1) ರ ಕರ್ನಾಟಕ ಸರ್ಕಾರದ ಆದೇಶದಲ್ಲಿ ದಿನಾಂಕ: 01/04/2018 ರಂದು/ ನಂತರ ನಿವೃತ್ತಿ ಹೊಂದಿದ/ಹೊಂದುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ ಹಾಗೂ ದಿನಾಂಕ: 01/04/2018 ರಂದು/ ನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ/ಹೊಂದುವ ನೌಕರರ ಅರ್ಹ ವಾರಸುದಾರರಿಗೆ (ಬಿ.ಇ.ಎಸ್.ಆರ್ ನಿಯಮಾನುಸಾರ) ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯವನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ವಿಸ್ತರಿಸಿದೆ.

ಸರ್ಕಾರದ ಸದರಿ ಆದೇಶವನ್ನು ನಿಗಮದಲ್ಲಿಯೂ ಸಹ ಉಲ್ಲೇಖ (3) ರ ಆದೇಶದಲ್ಲಿ ಅಳವಡಿಸಿಕೊಂಡು ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ಕವಿಪ್ರನಿನಿ/ ಎಸ್ಕಾಂಗಳ ಅಧಿಕಾರಿ/ ನೌಕರರಿಗೆ/ ಅವರ ಅವಲಂಬಿತರಿಗೆ, ದಿನಾಂಕ: 01/04/2018 ರಿಂದ ಜಾರಿಗೆ ಬರುವಂತೆ ಕೆಲವು ಷರತ್ತುಗಳಿಗೆ ಒಳಪಟ್ಟು ಹಳೇ ಪಿಂಚಣಿ ಯೋಜನೆಯ ನಿಯಮಾನುಸಾರ ಅನ್ವಯಿಸಿ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (1) ರ ಆದೇಶಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಉಲ್ಲೇಖ (4)ರಲ್ಲಿ ಕೆಲವೊಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ನಿಗಮದ ನಿಯಮಾನುಸಾರ ಉಲ್ಲೇಖ (3)ರ ಆದೇಶಕ್ಕೆ ಸಂಬಂಧಿಸಿದಂತೆ, ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ93/36012/2021-22 ದಿನಾಂಕ:26.10.2021ರಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖ (5) ರ ದಿನಾಂಕ: 26/10/2021 ರ ಆದೇಶದ ಕಂಡಿಕೆ VII ರಲ್ಲಿ "2015 ಹಾಗೂ ನಂತರ ವಿಸಕಂಗಳು/ ಕವಿಪ್ರನಿನಿಯಲ್ಲಿ ನೇರ ನೇಮಕಾತಿ ಹೊಂದಿರುವ ಎಲ್ಲಾ ಪದವೃಂದದ ಅಧಿಕಾರಿ/ ನೌಕರರ ಪ್ರಕರಣಗಳಲ್ಲಿ ಕುಟುಂಬ ಪಿಂಚಣಿ ಹಾಗೂ ಮರಣ ಉಪದಾನ ಮಂಜೂರಾತಿ/ ಅಧಿಕರಿಸುವ ಪ್ರಾಧಿಕಾರಿಗಳ ಬಗ್ಗೆ ಕವಿಪ್ರನಿನಿ ಮತ್ತು ಸಂಬಂಧಿಸಿದ ವಿಸಕಂಗಳು ಪ್ರತ್ಯೇಕ ಆದೇಶ ಹೊರಡಿಸುವುದು" ಎಂದು ತಿಳಿಸಲಾಗಿರುತ್ತದೆ.

ದಿನಾಂಕ: 15.09.2022 ರಂದು ನಡೆದ 135ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ, 2015 ಹಾಗೂ ನಂತರ ಕವಿಪ್ರನಿನಿ/ವಿಸಕಂಗಳಲ್ಲಿ ನೇರ ನೇಮಕಾತಿ ಹೊಂದಿರುವ ಎಲ್ಲಾ ಪದವೃಂದದ ಅಧಿಕಾರಿ/ನೌಕರರನ್ನು ಹಾಲಿ ಚಾಲ್ತಿಯಲ್ಲಿರುವ ಜೇಷ್ಠತ ಪಟ್ಟಿಯ ಸಾಮಾನ್ಯ ಸೇವಾ ಹಿರಿತನದ ಪಟ್ಟಿಯಲ್ಲಿ ಕೆಲವು ಷರತ್ತುಗಳಿಗೆ ಒಳಪಟ್ಟು ಸೇರಿಸಲು ನಿರ್ಧಾರಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (7) ರಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ಕವಿಪ್ರನಿನಿ ಅಧಿಕಾರ ಪ್ರತ್ಯಾಯೋಜನೆ ಕೈಪಿಡಿ-2018 ರ ತಿದ್ದುಪಡಿ ಆದೇಶ ದಿನಾಂಕ: 17/01/2019 ರಲ್ಲಿ ತಿಳಿಸಿರುವ ಸಕ್ಷಮ ಮಂಜೂರಾತಿ/ ಅಧಿಕರಣ ಪ್ರಾಧಿಕಾರಿಗಳನ್ನು 2015 ರ ನಂತರ ನೇರ ನೇಮಕಾತಿ ಹೊಂದಿರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ನೌಕರರ/ ಅಧಿಕಾರಿಗಳ ನಿವೃತ್ತಿ/ ಮರಣ ಸವಲತ್ತುಗಳನ್ನು ಮಂಜೂರು ಮಾಡಿ ಅಧಿಕರಿಸುವ ಪ್ರಾಧಿಕಾರಿಗಳಾಗಿ ನೇಮಕ ಮಾಡಲು ಅನುಮೋದಿಸಿರುವ ಮೇರೆಗೆ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ93**/CYS-6 **ಬೆಂಗಳೂರು ದಿನಾಂಕ:** 04 OCT 2023

135ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಿದಂತೆ, 2015 ಹಾಗೂ ನಂತರ ವಿಸಕಂಗಳು/ ಕವಿಪ್ರನಿನಿಯಲ್ಲಿ ನೇರ ನೇಮಕಾತಿ ಹೊಂದಿರುವ ಎಲ್ಲಾ ಪದವೃಂದದ ಅಧಿಕಾರಿ/ ನೌಕರರ ಪ್ರಕರಣಗಳಲ್ಲಿಯೂ ಸಹ, ಕವಿಪ್ರನಿನಿ ಅಧಿಕಾರ ಪ್ರತ್ಯಾಯೋಜನೆ ಕೈಪಿಡಿ-2018ರ ತಿದ್ದುಪಡಿ ಆದೇಶ ದಿನಾಂಕ: 17/01/2019 ರಲ್ಲಿ ತಿಳಿಸಿರುವ ಸಕ್ಷಮ ಮಂಜೂರಾತಿ/ ಅಧಿಕರಣ ಪ್ರಾಧಿಕಾರಿಗಳನ್ನು ಕುಟುಂಬ ಪಿಂಚಣಿ, ನಿವೃತ್ತಿ ಉಪದಾನ ಮತ್ತು ಮರಣ ಉಪದಾನ ಮಂಜೂರಾತಿ/ ಅಧಿಕರಣ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಿದೆ. (ಅನುಬಂಧದಲ್ಲಿರುವಂತೆ).

ಉಳಿದಂತೆ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ93/36012/2021-22 ದಿನಾಂಕ: 26/10/2021 ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸುವುದು.

ನಿರ್ದೇಶಕರು (ಆ ಮತ್ತು ಮಾಸಂ)
ಕವಿಪ್ರನಿನಿ

<u>**ಪ್ರತಿಗಳು:**</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.

2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಕವಿಪ್ರನಿನಿ/ಎಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಅಧೀಕ್ಷಕ ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು www.kptcl.com.karnataka.gov.in→eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**

**ಪ್ರತಿಗಳು ಮಾಹಿತಿಗಾಗಿ (ಜಾಲತಾಣದಲ್ಲಿ ಪ್ರಕಟಿಸಿದೆ)**

1) ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ/ನಿಯಂತ್ರಣಾಧಿಕಾರಿ(ಆಂ.ಪ) ಕವಿಪ್ರನಿನಿ/ ಎಸ್ಕಾಂ
2) ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪಲೆಕ್ಕನಿಯಂತ್ರಣಾಧಿಕಾರಿ/ ಉಪಲೆಕ್ಕನಿಯಂತ್ರಣಾಧಿಕಾರಿ (ಆಂ.ಪ) ಕವಿಪ್ರನಿನಿ/ ಎಸ್ಕಾಂ
3) ಎಲ್ಲಾ ಲೆಕ್ಕಾಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ) ಕವಿಪ್ರನಿನಿ/ ಎಸ್ಕಾಂ

**ಪ್ರತಿಗಳು ಮಾಹಿತಿಗಾಗಿ**

1. ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋ.ಸಂ.659) ಮತ್ತು ನಿರ್ದೇಶಕರು, ಕವಿಪ್ರನಿನಿ & ವಿಸಕಂಗಳು.
2. ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ & ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್. ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳ ಪ.ಜಾ./ಪ.ಪಂ.ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಪಿಂಚಣಿದಾರರ ಸಂಘ, ಬೆಂಗಳೂರು.

ANNEXURE

# KARNATAKA POWER TRANSMISSION CORPORATION LIMITED

## SCHEDULE OF PENSION SANCTIONING AND AUTHORISING AUTHORITIES FOR THE EMPLOYEES APPOINTED FROM 2015 AND ONWARDS

<table>
<tr><th rowspan="2">Sl. No.</th><th rowspan="2">Pension sanction for</th><th colspan="2">As existing</th><th colspan="2">As amended</th></tr>
<tr><th>Sanctioning Authority</th><th>Pension Authorising Authority</th><th>Sanctioning Authority</th><th>Pension Authorising Authority</th></tr>
<tr><td>1</td><td>All Chief Engineers & Financial Advisers.</td><td>Managing Director, KPTCL</td><td rowspan="3">Financial Adviser (A&R), KPTCL</td><td>Managing Director, KPTCL</td><td rowspan="4">Financial Adviser (NDCPS), KPTCL</td></tr>
<tr><td>2</td><td>All Superintending Engineers, Executive Engineers & Assistant Executive Engineers.</td><td>Director (A &HR), KPTCL</td><td>Director (A &HR), KPTCL</td></tr>
<tr><td>3</td><td>All Controllers of Accounts, Deputy Controllers of Accounts, Accounts Officer.</td><td>Financial Adviser (A & R), KPTCL</td><td>Financial Adviser (NDCPS), KPTCL</td></tr>
<tr><td>4</td><td>All Group 'B' officers equivalent to the rank of Assistant Engineers and Assistant Accounts Officers.</td><td>Superintending Engineers' (Ele) of (W&M) Circles</td><td>Financial Advisers of jurisdictional (ESCOM)</td><td>Superintending Engineers' (Ele) of O&M Circles.</td></tr>
<tr><td>5</td><td>Employees below the rank of Assistant Engineers and Assistant Accounts Officers working & retiring in their Circle, including all maintenance employees in the cadre of Mech.Grade-I / Junior Asst. / Typist and other equivalent cadres. (Including Employees of KPTCL Works & Maintenance Circles / Major Works / TL&SS Divisions & other KPTCL Offices).</td><td>Superintending Engineers' (Ele) of (W&M) Circles</td><td>Financial Advisers of jurisdictional (ESCOM)</td><td>Superintending Engineers' (Ele) of O&M Circles.<br><br><u>Note:</u> In respect of Employees working in Zonal Offices/ Major works circles/ Divisions, TL & SS Circles/ Divisions/ other KPTCL Offices, the Pension Paper shall be sent to appropriate Appointing Authorities for according sanction.</td><td>Chief General Manager (F & C)/ Chief Financial Officer of jurisdictional ESCOMs</td></tr>
</table>

| Sl. No. | Pension sanction for | As existing | | As amended | |
|---|---|---|---|---|---|
| | | Sanctioning Authority | Pension Authorising Authority | Sanctioning Authority | Pension Authorising Authority |
| 6 | All maintenance employees below the rank of Mechanic Grade-I / Junior Asst./ Typist and equivalent cadres.(Including Employees of KPTCL Works & Maintenance Circles / Major Works Divisions / TL&SS Divisions & other KPTCL Offices) | Executive Engineers' (Ele) of MW / TL&SS Divisions | Financial Advisers of jurisdictional (ESCOM) | 1. Executive Engineers of concerned/ Jurisdictional O&M Divisions.<br><br>Note: In respect of Employees working in Zonal Offices/ Major works circles/ Divisions, TL & SS Circles/ Divisions/other KPTCL Offices, the Pension Paper shall be sent to appropriate Appointing Authorities for according sanction. | Chief General Manager (F & C)/ Chief Financial Officer of jurisdictional ESCOMs |

**Note: Higher Authorities other than specified above are also empowered to sanction pension to the officers/employees in case such officers/employees are working directly under their control.**